ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 25–10–2017

# ಪತ್ರಿಕಾ ಆಮಂತ್ರಣ

**1. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಹನಿ ನೀರಾವರಿ ಯೋಜನೆಯ ಅನುಷ್ಠಾನದ ಬಗ್ಗೆ ತರಬೇತಿ:**

**ಉದ್ಘಾಟನೆ:**

**ಎಸ್.ಎಸ್. ಮಲ್ಲಿಕಾರ್ಜುನ್,**
**ಕೃಷಿ ಮಾರುಕಟ್ಟೆ ಸಚಿವರು**

**ದಿನಾಂಕ: 26–10–2017, ಗುರುವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ**
**ಸ್ಥಳ: ಕೊಠಡಿ ಸಂಖ್ಯೆ 419, ವಿಕಾಸ ಸೌಧ, ಬೆಂಗಳೂರು**

**2. ಪತ್ರಿಕಾಗೋಷ್ಠಿ:**
**ಪ್ರೊ. ಎಸ್.ಜಿ. ಸಿದ್ಧರಾಮಯ್ಯ,**
**ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ**

**ದಿನಾಂಕ: 26–10–2017, ಗುರುವಾರ, ಸಮಯ: ಬೆಳಿಗ್ಗೆ 11–30 ಗಂಟೆಗೆ**
**ಸ್ಥಳ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ,**
**ದೇವನಹಳ್ಳಿ– ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ**

<u>***ಪತ್ರಿಕಾ ಪ್ರಕಟಣೆ***</u>

**ಸಂಖ್ಯೆ 213/333**

ಶಾಸಕರು ಜನಸೇವಕರೂ ಹೌದು; ರಾಷ್ಟ್ರನಿರ್ಮಾತೃಗಳೂ ಹೌದು: ರಾಷ್ಟ್ರಪತಿ ರಾಮನಾಥ್ ಕೋವಿಂದ್

ಬೆಂಗಳೂರು, ಅಕ್ಟೋಬರ್ 25 ( ಕರ್ನಾಟಕ ವಾರ್ತೆ) :

ಶಾಸಕರು ಜನಸೇವಕರೂ ಹೌದು; ರಾಷ್ಟ್ರನಿರ್ಮಾತೃಗಳೂ ಹೌದು ಎಂದು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅಭಿಪ್ರಾಯಪಟ್ಟರು.

ವಿಧಾನ ಸೌಧ ಕಟ್ಟಡದ ವಜ್ರ ಮಹೋತ್ಸವದ ಸಂದರ್ಭದಲ್ಲಿ ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಅವರು ತಮ್ಮ ಕರ್ತವ್ಯವನ್ನು ಪ್ರಾಮಾಣಿಕತೆ ಮತ್ತು ಸಮರ್ಪಣಾ ಮನೋಭಾವದಿಂದ ನಿರ್ವಹಿಸುವವರೆಲ್ಲರೂ ರಾಷ್ಟ್ರ ನಿರ್ಮಾತೃಗಳು. ಈ ಕಟ್ಟಡದ ಸ್ವಚ್ಛತೆಯನ್ನು ನಿರ್ವಹಿಸುವವರು ರಾಷ್ಟ್ರನಿರ್ಮಾತೃಗಳೇ. ಇದಕ್ಕೆ ಭದ್ರತೆ ಒದಗಿಸುವವರು ರಾಷ್ಟ್ರ ನಿರ್ಮಾತೃಗಳೇ. ತಮ್ಮ ದೈನಂದಿನ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವ ಸಾಮಾನ್ಯ ನಾಗರಿಕರ ಪ್ರಯತ್ನದಿಂದಲೇ ರಾಷ್ಟ್ರಗಳ ನಿರ್ಮಾಣವಾಗುತ್ತದೆ. ವಿಧಾನ ಸೌಧದಲ್ಲಿ ಕುಳಿತು ಕಾರ್ಯ ನಿರ್ವಹಿಸುವ ನೀವು ಇದನ್ನು ಸದಾ ನೆನಪಿನಲ್ಲಿಡುವಿರಿ ಮತ್ತು ಇದರಿಂದ ಸ್ಫೂರ್ತಿ ಪಡೆಯುವಿರಿ ಎಂಬ ವಿಶ್ವಾಸವಿದೆ ಎಂದು ಅವರು ಶಾಸಕರಿಗೆ ಕಿವಿಮಾತು ಹೇಳಿದರು.

ಈ ವಜ್ರ ಮಹೋತ್ಸವವು ಹೆಮ್ಮೆಯ ಇತಿಹಾಸದ ಆಚರಣೆಯಷ್ಟೇ ಆಗದಿರಲಿ. ಭವಿಷ್ಯದ ಕುರಿತ ನಮ್ಮ ಬದ್ಧತೆಯೂ ಆಗಲಿ ಎಂದು ಅವರು ಆಶಿಸಿದರು. ಇದು ಕೇವಲ ಕಟ್ಟಡದ ವಜ್ರಮಹೋತ್ಸವವಲ್ಲ, ಇದು ಕರ್ನಾಟಕ ರಾಜ್ಯದ ಜನರ ಬದುಕನ್ನು ಉತ್ತಮಗೊಳಿಸುವುದಕ್ಕಾಗಿ ಉಭಯ ಸದನಗಳಲ್ಲಿ ನಡೆದ ಚರ್ಚೆಗಳು ಅಂಗೀಕಾರವಾದ ಶಾಸನಗಳು ಮತ್ತು ನೀತಿ ನಿಯಮಗಳ ವಜ್ರಮಹೋತ್ಸವ ಎಂದು ಅವರು ಹೇಳಿದರು.

ಶಾಸನ ಸಭೆಯ ಮೂರು "ಡಿ" ಗಳ ಕುರಿತು ಎಲ್ಲರಿಗೂ ತಿಳಿದಿದೆ. ಇದು ಚರ್ಚೆ ಮಾಡುವ **(Debate)** ಅಭಿಪ್ರಾಯಭೇದ ವ್ಯಕ್ತಪಡಿಸುವ **(Dissent)** ಹಾಗೂ ಅಂತಿಮವಾಗಿ ತೀರ್ಮಾನ ಕೈಗೊಳ್ಳುವ **(Decide)** ಸ್ಥಳವಾಗಿದೆ. ಇದರೊಂದಿಗೆ ಸೌಜನ್ಯ **(Decency)** ಸೇರಿದರೆ ಮಾತ್ರ 5 ನೇ "ಡಿ" ಪ್ರಜಾಪ್ರಭುತ್ವ **(Democracy)** ಸಾಕಾರಗೊಳ್ಳುತ್ತದೆ. ಈ ಶಾಸನ ಸಭೆಯು ಕರ್ನಾಟಕದ ಜನತೆಯ ಇಚ್ಛಾಶಕ್ತಿ, ಆಕಾಂಕ್ಷೆ ಹಾಗೂ ಆಶಾಭಾವಗಳು ಮೈವೆತ್ತ ರೂಪವಾಗಿದೆ. ಜನರ ಕನಸುಗಳನ್ನು ಸಾಕಾರಗೊಳಿಸಲು ಶಾಸನ ಸಭೆಯ ಎರಡೂ ಸಭೆಯ ಸಾಮುದಾಯಿಕ ಬುದ್ಧಿಮತ್ತೆಯ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. ಚರ್ಚಿಸುವ, ಸಂವಾದ ನಡೆಯುವ ವಿಚಾರಿಸುವ ಹಾಗೂ ಸೇವೆಯ ಭಾವಗಳ ಸ್ಫೂರ್ತಿ ಸೆಲೆ ಕೇವಲ ವಿಧಾನ ಸೌಧ ಅಥವಾ ರಾಜಕೀಯ ಬದುಕಿಗೆ ಸೀಮಿತವಾಗಿಲ್ಲ. ಈ ರಾಜ್ಯದ ಮಣ್ಣಿನಲ್ಲಿಯೇ ಮಿಡಿತವಾಗಿದೆ. ಇತಿಹಾಸದಲ್ಲಿ ಕರ್ನಾಟಕವು ವಿಜ್ಞಾನದಷ್ಟೇ ಆಧ್ಯಾತ್ಮಕವಾಗಿ ತಾಂತ್ರಿಕ

ಪರಿಣಿತರಷ್ಟೇ ಹೆಸರಾಗಿದೆ. ಈ ದೇಶದ ಬೌದ್ಧಿಕ ಸಾಂಸ್ಕೃತಿಕ ಹಾಗೂ ಪ್ರಜಾಸತ್ತೆಯ ಪರಂಪರೆಗೆ ಕರ್ನಾಟಕದ ಕೊಡುಗೆ ಅಪಾರವಾಗಿದೆ ಎಂದು ಬಣ್ಣಿಸಿದರು.

ಈ ಕಟ್ಟಡವು ಕರ್ನಾಟಕದಲ್ಲಿ ಸಾರ್ವಜನಿಕ ಸೇವೆಯ ಇತಿಹಾಸದ ಸ್ಮಾರಕವಾಗಿದೆ. ಈ ಎರಡು ಸದನಗಳ ಕಲಾಪಗಳಲ್ಲಿ ಹಲವಾರು ರಾಜಕೀಯ ದಿಗ್ಗಜರು ಭಾಗವಹಿಸಿದ್ದಾರೆ. ಅನೇಕ ಅವಿಸ್ಮರಣೀಯ ಚರ್ಚೆಗಳಲ್ಲಿ ಪಾಲ್ಗೊಂಡಿದ್ದಾರೆ. ಇಂದು ಮೊದಲ ಮೂರು ಮುಖ್ಯಮಂತ್ರಿಗಳಾದ ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ ಹಾಗೂ ಕಡಿದಾಳ್ ಮಂಜಪ್ಪ ಅವರ ಕುಟುಂಬದವರನ್ನು ಗೌರವಿಸಲಾಗುತ್ತಿದೆ. ಇದರೊಂದಿಗೆ ನಾವು ಎಸ್. ನಿಜಲಿಂಗಪ್ಪ, ದೇವರಾಜ ಅರಸು, ಬಿ.ಡಿ. ಜತ್ತಿ, ರಾಮಕೃಷ್ಣ ಹೆಗ್ಗಡೆ, ಎಸ್.ಆರ್. ಬೊಮ್ಮಯಿ, ವಿರೇಂದ್ರ ಪಾಟೀಲ್, ಎಸ್.ಎಂ. ಕೃಷ್ಣ ಹಾಗೂ ನಮ್ಮ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮೊದಲಾದ ಹಲವಾರು ಗಣ್ಯರನ್ನು ನೆನಪಿಸಿಕೊಳ್ಳಲೇಬೇಕು ಎಂದು ಅವರು ನುಡಿದರು.

ಇಂತಹ ಅಸಾಧಾರಣ ಜನಪ್ರತಿನಿಧಿಗಳ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಹೊಣೆಗಾರಿಕೆ ಉಬಯ ಸದನಗಳ ಈಗಿನ ಸದಸ್ಯರ ಮೇಲಿದೆ. ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳು ಪ್ರಜಾಪ್ರಭುತ್ವದ ಪವಿತ್ರ ದೇವಾಲಯಗಳಾಗಿ ಕಾರ್ಯನಿರ್ವಹಿಸಬೇಕು. ರಾಜಕೀಯ ಹಾಗೂ ನೀತಿ ನಿರೂಪಣೆಯ ಮಟ್ಟವನ್ನು ಹೆಚ್ಚಿಸಬೇಕು ಎಂದು ರಾಷ್ಟ್ರಪತಿಗಳು ಸಲಹೆ ನೀಡಿದರು.

ಮತದಾರರಿಂದ ಒಬ್ಬ ವ್ಯಕ್ತಿ ಈ ಸದನಕ್ಕೆ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಆದರೆ ಚುನಾಯಿತರಾದ ನಂತರ ಅವರು ವಿಧಾನ ಸಭಾ ಅಥವಾ ವಿಧಾನ ಪರಿಷತ್ ಸದಸ್ಯ ಇಡೀ ಕ್ಷೇತ್ರವನ್ನೇ ಪ್ರತಿನಿಧಿಸುತ್ತಾರೆ. ಚುನಾವಣೆಯ ವಿರೋಧಿಯೊಬ್ಬ ರಾಜಕೀಯ ಪ್ರತಿಸ್ಪರ್ಧಿಯಷ್ಟೇ, ಶತ್ರುವಲ್ಲ. ಚುನಾವಣೆಯ ನಂತರ ಪ್ರತಿ ಸ್ಪರ್ಧಿಯು ಕ್ಷೇತ್ರದ ಅಭಿವೃದ್ಧಿ ಹಾಗೂ ಕ್ಷೇಮವನ್ನು ಖಾತರಿ ಪಡಿಸುವ ಕಾಯಕದಲ್ಲಿ ಸಹೋದ್ಯೋಗಿ ಆಗಬಹುದು. ಇದು ನಾವೆಲ್ಲರೂ ಮೆಚ್ಚಬೇಕಾದ ಪ್ರಜಾಪ್ರಭುತ್ವದ ಉತ್ತಮ ಅಂಶ ಎಂದು ಅವರು ತಿಳಿಸಿದರು.

ಕರ್ನಾಟಕದ ಕನಸುಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಅವು ಭಾರತದ ಕನಸುಗಳು. ಕರ್ನಾಟಕವು ಭಾರತದ ಆರ್ಥಿಕತೆಯ ಎಂಜಿನ್‌ನಂತಿದೆ. ತನ್ನ ಸಂಸ್ಕೃತಿ ಮತ್ತು ಭಾಷೆಯ ವೈಶಿಷ್ಟ್ಯವನ್ನು ಉಳಿಸಿಕೊಂಡು ದೇಶದೆಲ್ಲಡೆಯಿಂದ ಯುವಕರನ್ನು ಆಕರ್ಷಿಸುವ ಮಿನಿಭಾರತವಾಗಿದೆ. ದೇಶದ ಯುವಕರು ಕರ್ನಾಟಕದಲ್ಲಿ ಜ್ಞಾನ ಮತ್ತು ಉದ್ಯೋಗ ಅರಸಿಕೊಂಡು ಬರುತ್ತಿದ್ದಾರೆ. ಅವರ ಪರಿಶ್ರಮ ಮತ್ತು ಬುದ್ಧಿಮತ್ತೆಯನ್ನು ಕೊಡುಗೆಯಾಗಿ ನೀಡುತ್ತಿದ್ದಾರೆ. ಇದರಿಂದ ಎಲ್ಲರಿಗೂ ಲಾಭವಾಗುವುದು ಎಂದು ಅವರು ಅಭಿಪ್ರಾಯಪಟ್ಟರು.

ಸದನದಲ್ಲಿ ರಾಜ್ಯಪಾಲ ವಜುಬಾಯಿ ವಾಲಾ, ವಿಧಾನ ಪರಿಷತ್ ಅಧ್ಯಕ್ಷ ಡಿ.ಹೆಚ್. ಶಂಕರಮೂರ್ತಿ, ವಿಧಾನ ಸಭಾಧ್ಯಕ್ಷ ಕೆ.ಬಿ. ಕೋಳಿವಾಡ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಸಂಪುಟ ಸದಸ್ಯರು, ವಿರೋದ ಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿ ವೀರಪ್ಪಮೊಯ್ಲಿ, ಭಾರತರತ್ನ ಡಾ: ಸಿ.ಎನ್.ಆರ್. ರಾವ್, ಕೇಂದ್ರ ಸಚಿವರು, ಕೇಂದ್ರ ಮಾಜಿ ಸಚಿವ ಎಂ.ವಿ. ರಾಜಶೇಖರನ್, ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಸಾಹಿತಿ ಚಂದ್ರಶೇಖರ ಪಾಟೀಲ, ಮಾಜಿ ಶಾಸಕರು, ಸಂಸತ್ ಸದಸ್ಯರು, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಸಂಖ್ಯೆ 214/334**

## ರಾಷ್ಟ್ರಪತಿಯವರಿಂದ ವಿಧಾನ ಪರಿಷತ್ ಸಭಾಂಗಣ ವೀಕ್ಷಣೆ:

ಬೆಂಗಳೂರು, ಅಕ್ಟೋಬರ್ 25 ( ಕರ್ನಾಟಕ ವಾರ್ತೆ) :

ಭಾರತದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಿದ ನಂತರ ವಿಧಾನ ಪರಿಷತ್ತಿನ ಸಭಾಂಗಣಕ್ಕೆ ಭೇಟಿ ನೀಡಿ ವಿಶೇಷ ಛಾಯಾಚಿತ್ರಗಳು ಹಾಗೂ ವಿನ್ಯಾಸವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸಭಾಪತಿ ಡಿ.ಎಚ್. ಶಂಕರಮೂರ್ತಿ, ವಿಧಾನ ಸಭಾಧ್ಯಕ್ಷ ಕೆ.ಬಿ. ಕೋಳಿವಾಡ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿಗಳಿಗೆ ಪರಿಷತ್ತಿನ ಸಭಾಂಗಣದ ವಿಶೇಷತೆ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ರಾಷ್ಟ್ರಪತಿಗಳಿಗೆ ಪೇಟ, ಶಾಲು, ತಾಂಬೂಲ ಮತ್ತು ಗಾಂಧೀ ಪ್ರತಿಮೆ ನೀಡಿ ಸನ್ಮಾನಿಸಲಾಯಿತು.

ನಂತರ ರಾಷ್ಟ್ರಪತಿಗಳು ಚಹಾ ಸೇವಿಸಿ ವಿಧಾನ ಪರಿಷತ್‌ನಿಂದ ತೆರಳಿದರು.

ಈ ಸಂದರ್ಭದಲ್ಲಿ ರಾಜ್ಯಪಾಲ ವಜುಭಾಯಿ ವಾಲ, ಕೇಂದ್ರ ಸಚಿವ ಅನಂತಕುಮಾರ್, ಕಾನೂನು ಸಚಿವ ಟಿ.ಬಿ. ಜಯಚಂದ್ರ ಮೊದಲಾದವರು ಹಾಜರಿದ್ದರು.

## ರಾಷ್ಟ್ರಪತಿ ನಿರ್ಗಮನ

ಸಂಖ್ಯೆ 215/335

ಬೆಂಗಳೂರು, ಅಕ್ಟೋಬರ್ 25 ( ಕರ್ನಾಟಕ ವಾರ್ತೆ) :

ಅಧಿಕೃತ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಎರಡು ದಿನಗಳ ಭೇಟಿಗಾಗಿ ಬೆಂಗಳೂರಿಗೆ ಆಗಮಿಸಿದ್ದ ರಾಷ್ಟ್ರಪತಿ ಶ್ರೀ ರಾಮನಾಥ ಕೋವಿಂದ್ ಅವರು ಇಂದು ಮಧ್ಯಾಹ್ನ ನವದೆಹಲಿಗೆ ಹಿಂತಿರುಗಿದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆತ್ಮೀಯವಾಗಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ರಾಜ್ಯಪಾಲ ವಜುಭಾಯಿ ವಾಲ, ಗೃಹ ಸಚಿವ ರಾಮಲಿಂಗಾರೆಡ್ಡಿ, ಕೇಂದ್ರ ಸಚಿವ ಅನಂತಕುಮಾರ್, ಮುಖ್ಯ ಕಾರ್ಯದರ್ಶಿ ಸುಭಾಷ್‌ಚಂದ್ರ ಕುಂಠಿಆ, ಡಿ.ಜಿ. & ಐ.ಜಿ. ರೂಪಕ್‌ಕುಮಾರ್ ದತ್ತ, ನಗರ ಪೊಲೀಸ್ ಆಯುಕ್ತ ಸುನೀಲ್‌ಕುಮಾರ್ ಅವರು ಹಾಜರಿದ್ದರು.

ಛಾಯಾಚಿತ್ರ ಶೀರ್ಷಿಕೆ

ವಿಧಾನ ಸೌಧದ ವಜ್ರ ಮಹೋತ್ಸವದ ಅಂಗವಾಗಿ ಜಂಟಿ ಸದನವನ್ನು ಉದ್ದೇಶಿಸಿ ರಾಷ್ಟ್ರಪತಿ ಶ್ರೀ ರಾಮನಾಥ ಕೋವಿಂದ್ ಅವರು ಭಾಷಣ ಮಾಡಿದ ನಂತರ ವಿಧಾನ ಸೌಧ ಮತ್ತು ವಿಕಾಸ ಸೌಧದ ನಡುವೆ ಇರುವ ಗಾಂಧೀ ಪ್ರತಿಮೆಯ ಮುಂಬಾಗದಲ್ಲಿ ರಾಷ್ಟ್ರಪತಿಗಳೊಂದಿಗೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರ ಛಾಯಾ ಚಿತ್ರೀಕರಣ ನಡೆಯಿತು. ರಾಜ್ಯಪಾಲ ವಜುಭಾಯಿ ವಾಲಾ, ವಿಧಾನ ಪರಿಷತ್ ಸಭಾಪತಿ, ಡಿ.ಹೆಚ್. ಶಂಕರಮೂರ್ತಿ, ವಿಧಾನ ಸಭಾದ್ಯಕ್ಷ ಕೆ.ಬಿ. ಕೋಳಿವಾಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಜರಿದ್ದರು.

ಛಾಯಾಚಿತ್ರ ಶೀರ್ಷಿಕೆ

ಅಧಿಕೃತ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಎರಡು ದಿನಗಳ ಭೇಟಿಗಾಗಿ ಬೆಂಗಳೂರಿಗೆ ಆಗಮಿಸಿದ್ದ ರಾಷ್ಟ್ರಪತಿ ಶ್ರೀ ರಾಮನಾಥ ಕೋವಿಂದ್ ಅವರು ಇಂದು ಮಧ್ಯಾಹ್ನ ನವದೆಹಲಿಗೆ ಹಿಂತಿರುಗಿದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆತ್ಮೀಯವಾಗಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ರಾಜ್ಯಪಾಲ ವಜುಭಾಯಿ ವಾಲ, ಗೃಹ ಸಚಿವ ರಾಮಲಿಂಗಾರೆಡ್ಡಿ, ಕೇಂದ್ರ ಸಚಿವ ಅನಂತಕುಮಾರ್, ಮುಖ್ಯ ಕಾರ್ಯದರ್ಶಿ ಸುಭಾಶ್‌ಚಂದ್ರ ಕುಂಠಿಆ, ಡಿ.ಜಿ. & ಐ.ಜಿ. ರೂಪಕ್‌ಕುಮಾರ್ ದತ್ತ, ನಗರ ಪೊಲೀಸ್ ಆಯುಕ್ತ ಸುನೀಲ್‌ಕುಮಾರ್ ಅವರು ಹಾಜರಿದ್ದರು.

**ಸಂಖ್ಯೆ 216/336**

## ಹಗಲು ಯೋಗಕ್ಷೇಮ ಕೇಂದ್ರ ಪ್ರಾರಂಭಿಸಲು ಅರ್ಜಿ ಆಹ್ವಾನ

**ಬೆಂಗಳೂರು, ಅಕ್ಟೋಬರ್ 25 ( ಕರ್ನಾಟಕ ವಾರ್ತೆ) :**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ, 06 ರಿಂದ 18 ವರ್ಷದ ವಯೋಮಾನದೊಳಗಿನ ಸೆರಬ್ರಲ್ ಪಾಲ್ಸಿ, ಆಟಿಸಂ, ಬುದ್ಧಿಮಾಂದ್ಯತೆ ಹಾಗೂ ತೀವ್ರತೆರನಾದ ಬಹುವಿಧದ ವೈಕಲ್ಯತೆ ಹೊಂದಿರುವ ಮಕ್ಕಳಿಗಾಗಿ 04 ಕಂದಾಯ ವಿಭಾಗಗಳಲ್ಲಿ ಕ್ರಮವಾಗಿ ವಿಭಾಗದಲ್ಲಿ ಒಂದರಂತೆ ಒಟ್ಟು 4 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾರಂಭಿಸುವ ಸಂಬಂಧ ಈ ಕ್ಷೇತ್ರದಲ್ಲಿ ಅನುಭವವುಳ್ಳ ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಸ್ತಾವನೆಗಳನ್ನು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಪ್ರಧಾನ ಕಛೇರಿಗೆ ಸಲ್ಲಿಸುವುದು. ಅರ್ಜಿ ನಮೂನೆಯನ್ನು ಇಲಾಖೆಯ ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ. ಪ್ರಸ್ತಾವನೆಗಳನ್ನು ಸಲ್ಲಿಸಲು ದಿನಾಂಕ:10.11.2017 ರಂದು ಕಡೆಯ ದಿನಾಂಕವಾಗಿರುತ್ತದೆ.

ಇಲಾಖೆಯ ವೆಬ್‌ಸೈಟ್ ವಿಳಾಸ

**www.welfareofdisabled.kar.nic.in / www.dwdsc.kar.nic.in**

ಇಲಾಖೆಯ ವಿಳಾಸ

ನಿರ್ದೇಶಕರ ಕಛೇರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಅಂಬೇಡ್ಕರ್ ವೀಧಿ,
ಬೆಂಗಳೂರು–560001, ದೂರವಾಣಿ ಸಂಖ್ಯೆ:080–22866066, 228609071

ಸಂಖ್ಯೆ 217/337

## ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ "ಪುನೀತ ಯಾತ್ರೆ" ಪ್ರವಾಸ

ಬೆಂಗಳೂರು, ಅಕ್ಟೋಬರ್ 25 ( ಕರ್ನಾಟಕ ವಾರ್ತೆ) :

ರಾಜ್ಯದ ಜನತೆಯು ಪವಿತ್ರ ಕ್ಷೇತ್ರಗಳಿಗೆ ಭೇಟಿ ನೀಡಲು ಅನುಕೂಲವಾಗುವಂತೆ ಕರ್ನಾಟಕ ಸರ್ಕಾರವು "ಪುನೀತ ಯಾತ್ರೆ" ಎಂಬ ವಿನೂತನ ಯೋಜನೆ ಅಡಿಯಲ್ಲಿ ಪ್ರವಾಸಗಳನ್ನು ರೂಪಿಸಿ

**ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದ್ದು, ಈ ಪ್ರವಾಸಗಳ ಆಚರಣೆಯನ್ನು ದಿನಾಂಕ: 20–09–2017 ರಿಂದಲೇ ಪ್ರಾರಂಭಿಸಲಾಗಿದೆ.**

- ಈ ಪ್ರವಾಸಗಳಲ್ಲಿ ಪ್ರಯಾಣಿಸುವ ಪ್ರವಾಸಿಗರಿಗೆ ಸಾರಿಗೆ ಹಾಗೂ ವಸತಿ ವೆಚ್ಚಗಳ ಸಂಬಂಧವಾಗಿ ಶೇ.25 ರಷ್ಟು ರಿಯಾಯ್ತಿ ನೀಡಿ ದರಗಳನ್ನು ನಿಗದಿಪಡಿಸಲಾಗಿದೆ.
- ಸುಸಜ್ಜಿತ ಎಸಿ ಡೀಲಕ್ಸ್ ವಾಹನಗಳನ್ನು ಪ್ರವಾಸಗಳಿಗೆ ನಿಯೋಜಿಸಲಾಗುತ್ತಿದೆ.
- ಪ್ರವಾಸಿಗರಿಗೆ ಉತ್ತಮ ಗುಣಮಟ್ಟದ ಹಾಗೂ ಕೈಗೆಟಕುವ ದರಗಳಲ್ಲಿ ಲಭ್ಯವಿರುವ ಹೋಟೆಲುಗಳನ್ನು ವಸತಿ ವ್ಯವಸ್ಥೆ ಕಲ್ಪಸಲಾಗಿದೆ.
- ಪ್ರವಾಸಿಗರಿಗೆ ಸೂಕ್ತ ಮಾರ್ಗದರ್ಶನ ಹಾಗೂ ಕೆಲವೊಂದು ದೇವಸ್ಥಾನಗಳಲ್ಲಿ ಶೀಘ್ರ ದರ್ಶನ ವ್ಯವಸ್ಥೆಗಾಗಿ ನುರಿತ ಗೈಡುಗಳನ್ನು ನಿಯೋಜಿಸಲಾಗುತಿದೆ.
- ಪ್ರವಾಸಿಗರಿಗೆ ಕೇವಲ ರೂ.1,635/– ಗಳನ್ನು ಪಾವತಿಸಿ ಎರಡು ದಿನದ ತಿರುಪತಿ ಬಾಲಾಜಿ ದರ್ಶನದ ಪ್ರವಾಸವನ್ನು ಕೈಗೊಳ್ಳಬಹುದಾಗಿದೆ.
- ರೂ.940/– ಗಳನ್ನು ಪಾವತಿಸಿ ಬೇಲೂರು, ಹಳೇಬೀಡು ಹಾಗೂ ಶ್ರವಣಬೆಳಗೊಳ ಪ್ರವಾಸಗಳನ್ನು ಮಾಡಬಹುದಾಗಿದೆ.
- ರೂ.2,765/– ಗಳನ್ನು ಪಾವತಿಸಿ ಮಂತ್ರಾಲಯ–ಹಂಪಿ ಹೊಸಪೇಟೆಗಳಿಗೆ ನಾಲ್ಕು ದಿವಸಗಳ ಪ್ರವಾಸವನ್ನು ಕೈಗೊಳ್ಳಬಹುದಾಗಿದೆ.
- ರೂ.900/– ಗಳನ್ನು ಪಾವತಿಸಿ ಒಂದು ದಿವಸದ ಚಿಕ್ಕತಿರುಪತಿ, ಕೋಟಿಲಿಂಗೇಶ್ವರ ಹಾಗೂ ಕೈವಾರ ಸ್ಥಳಗಳ ಪ್ರವಾಸ ಕೈಗೊಳ್ಳಬಹುದಾಗಿದೆ.
- ರೂ.1,425/– ಗಳನ್ನು ಪಾವತಿಸಿ ಮಲೆಮಹದೇಶ್ವರ ಬೆಟ್ಟ, ಸುತ್ತೂರು, ನಂಜನಗೂಡು ಪ್ರವಾಸ ಕೈಗೊಳ್ಳಬಹುದಾಗಿದೆ.
- ರೂ.3,565/– ಗಳನ್ನು ಪಾವತಿಸಿ ಎಡೆಯೂರು, ಆದಿಚುಂಚನಗಿರಿ, ಸಿಗಂದೂರು, ಗೋಕರ್ಣ, ಬನವಾಸಿ, ಶಿರಸಿ, ಸೊಂದಾ ಗಳಿಗೆ ಭೇಟಿ ನೀಡಬಹುದಾಗಿದೆ.

**ಇದೇ ರೀತಿಯಾಗಿ ರಿಯಾಯ್ತಿ ದರಗಳಲ್ಲಿ ಶಿರಡಿ, ನಾಸಿಕ್, ಐದು ಜ್ಯೋರ್ತಿಲಿಂಗಗಳು, ಶನಿಸಿಂಗಾಪುರ, ಕೊಲ್ಲಾಪುರ, ಅಜಂತ, ಎಲ್ಲೋರ, ಔರಂಗಾಬಾದ್, ಮಧುರೈ, ಗುರುವಾಯೂರು, ಫಳನಿ, ಕೂಡಲಸಂಗಮ, ಆಲಮಟ್ಟಿ, ವಿಜಾಪುರ, ಗಾಣಗಾಪುರ, ಸನ್ನತಿ, ಸವದತ್ತಿ ಎಲ್ಲಮ್ಮ, ಬಾಬಾಬುಡನಗಿರಿ, ಬಸವನಬಾಗೇವಾಡಿ, ಬಸವಕಲ್ಯಾಣ, ಗುಲ್ಬರ್ಗ, ಬೀದರ್ ಈ ಸ್ಥಳಗಳ ಪ್ರವಾಸಗಳನ್ನು ಕೈಗೊಳ್ಳಬಹುದಾಗಿದೆ.**

**ಪ್ರವಾಸಿಗರು ಈ ಸೌಲಭ್ಯದ ಪ್ರಯೋಜನ ಪಡೆಯಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kstdc.co ಹಾಗೂ ದೂರವಾಣಿ ಸಂಖ್ಯೆ:080–43344334/8970650070 ರಲ್ಲಿ ಸಂಪರ್ಕಿಸಲು ಕೋರಲಾಗಿದೆ.**

**ಸಂಖ್ಯೆ 218/338**

## ಅಧ್ಯಕ್ಷರ ಪ್ರವಾಸ

**ಬೆಂಗಳೂರು, ಅಕ್ಟೋಬರ್ 25 ( ಕರ್ನಾಟಕ ವಾರ್ತೆ) :**

**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್ ಅವರು ಅಕ್ಟೋಬರ್ 25 ರಿಂದ 31 ರವರೆಗೆ ಕಲಬುರಗಿ ಹಾಗೂ ಯಾದಗಿರ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.**